<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>

<u>ಸಿಸಿ ನಂ.1223/2022</u>

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿತರುಃ1.ಶಬ್ಬಿರ ತಂದೆ ಅಲಿಸಾಬ ಹಬೀಬ,
ವಃ 33 ವರ್ಷ, ಉಃ ಲಾರಿ ಚಾಲಕ,
ಸಾಃ ಕೊಂಕಲ್ ಗ್ರಾಮ, ತಾಃ ಗುರುಮಿಠಕಲ್.
2. ಅಂಬ್ರೀಷ ತಂದೆ ಚಂದು ಪವಾರ,
ವಃ 32 ವರ್ಷ, ಉಃ ಲಾರಿ ಚಾಲಕ,
ಸಾಃ ಬೋರಬಂಡಾ ತಾಂಡಾ, ತಾಃ ಗುರುಮಿಠಕಲ್.
3. ಅಖೀಲಬಡಿ ತಂದೆ ಯನೂಸ ಬಡಿ,
ವಃ 38 ವರ್ಷ, ಉಃ ಲಾರಿ ನಂ.GJ36T4732 ಮಾಲೀಕ,
ಸಾಃ ಮೊಹಿಕಾ, ಗುಜರಾತ್ ರಾಜ್ಯ.
4. ತೌಫಿಕಬಡಿ ತಂದೆ ಅಲಿಬಾಯಿ ಬಡಿ,
ವಃ 31 ವರ್ಷ, ಉಃ ಲಾರಿ ನಂ.GJ36V0723 ಮಾಲೀಕ
ಸಾಃ ದಿಗಾಲಿಹಾ, ಗುಜರಾತ್ ರಾಜ್ಯ.

----

<u>ದೋ ಷಾ ರೋ ಪ ಣೆ</u>

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿ.ಎ.ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 11-10-2021 ರಂದು ಸಾಯುಂಕಾಲ 7.30 ಗಂಟೆ ಸುಮಾರಿಗೆ ಮಳಖೇಡ ಠಾಣಾ ಹದ್ದಿಯಲ್ಲಿರುವ ಸೇಡಂ-ಕಲಬುರಗಿ ಮುಖ್ಯ ರಸ್ತೆಯ ನೀಲಹಳ್ಳಿ ಗ್ರಾಮದ ಸಮೀಪ ಆರೋಪಿ ನಂ.1, 2 ನೇದ್ದವರು, 3, 4 ನೇ ಆರೋಪಿತರ ಹೆಸರಿನಲ್ಲಿದ್ದ ಲಾರಿ ನಂ.GJ36T4732, ಲಾರಿ ನಂ.GJ36V0723 ನೇದ್ದರಲ್ಲಿ ಗ್ರಾಮಸ್ಥರಿಗೆ ವಿತರಣೆ ಮಾಡಬೇಕಾದ 50 ಕೆಜಿ ತೂಕದ 1248 ಅಕ್ಕಿ ಚೀಲಗಳಲ್ಲಿ ತುಂಬಿಕೊಂಡು ಕಾಳಸಂತೆಯಲ್ಲಿ ಮಾರಾಟ ಮಾಡಲು ಸಾಗಿಸುತ್ತಿದ್ದಾಗ, ಚಾಸಾ.1, 6 ರಿಂದ 8 ನೇದ್ದವರು ಪರಿಶೀಲನೆ ಮಾಡಲಾಗಿ, ಆರೋಪಿತರಾದ ನೀವು ಪಡಿತರ ಕಾರ್ಡುದಾರರಿಗೆ ಸರಿಯಾಗಿ ಹಂಚಿಕೆ ಮಾಡದೇ ಹೆಚ್ಚಿನ ಹಣಕ್ಕಾಗಿ ಕಾಳಸಂತೆಯಲ್ಲಿ ಮಾರಾಟ ಮಾಡಿ ಸಾರ್ವಜನಿಕರಿಗೆ ಮೋಸ ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಅವಶ್ಯಕ ವಸ್ತುಗಳ ಕಾಯ್ದೆ 1955 ಕಲಂ 3 ಮತ್ತು 7 ಅಡಿಯಲ್ಲಿ ಅಪರಾಧಗಳನ್ನು ಎಸಗಿದ್ದು, ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕ 12-04-2023

ಪ್ರ.ದ.ನ್ಯಾದಂ. ಸೇಡಂ.